ಕರ್ನಾಟಕ ಸರಕಾರ

ಸಂ/ಕಂ/ಪಹಣಿ/ಕಂ/ಗ್ರೈ/10/15–16

ತಾಲೂಕು ಕಛೇರಿ ಹೂವಿನಹಡಗಲಿ
ದಿನಾಂಕ:–26–05–16

**ಉಪಸ್ಥಿತರು** :– ಹೆಚ್ ವಿಶ್ವನಾಥ ತಹಶೀಲ್ದಾರರು

| ವಾದಿಗಳು | ಪ್ರತಿವಾದಿಗಳು |
|---|---|
| 1) ಮೋಟ್ಲನಾಯ್ಕ ತಂದೆ ನಾಣ್ಯನಾಯ್ಕ<br>2) ಶ್ರೀಮತಿ ಸೀತಾಬಾಯಿ ಗಂಡ ಠಾಕ್ರ್ಯನಾಯ್ಕ<br>3) ರೂಪ್ಲನಾಯ್ಕ ತಂದೆ ನಾಣ್ಯನಾಯ್ಕ<br>4) ಕುಮಾರನಾಯ್ಕ ತಂದೆ ಲಿಂಗಾನಾಯ್ಕ<br>5) ರೇವಣನಾಯ್ಕ ತಂದೆ ಜಗ್ಯನಾಯ್ಕ | 1) ಕಂದಾಯ ನಿರೀಕ್ಷಕರು ಹೂವಿನಹಡಗಲಿ<br>2) ಪರಿವೀಕ್ಷಕರು ಭೂಮಾಪನ ಶಾಖೆ ಹೂವಿನಹಡಗಲಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸನಂ | ವಿಸ್ತೀರ್ಣ |
|---|---|---|
| ತಮಲಾಪುರ | 85/ಎ | 1.06 |
| | 85/ಬಿ | 4.14 |

**ಪ್ರಸ್ತಾವನೆ:–**

ಮೇಲಿನ ದಾವಾ ಜಮೀನುಗಳನ್ನುವಾದಿಗಳು ನೋಂದಾಯಿತ ವಲ್ಲದ ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು ಈ ಹಿನ್ನಲೆಯಲ್ಲಿ ನೊಂದಾಯಿತವಲ್ಲದ ಪಾಲುವಿಭಾಗ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗಾಮಲೆಕ್ಕಾಧಿಕಾರಿಗಳು ತಮಲಾಪುರರವರು ನಮೂನೆ21ನ್ನು ಜಾರಿಮಾಡಲಾಗಿ ಯಾವುದೇ ಅಕ್ಷೇಪಣೆಗಳು ನಮೂದಾಗಿರುವುದಿಲ್ಲ ಕಾರಣ ಕಂದಾಯ ಪರಿವೀಕ್ಷಕರು ಹೂವಿನಹಡಗಲಿರವರು ಹಕ್ಕು ಬದಲಾವಣೆ ಅರ್ಜಿಯನ್ನು ಮಂಜೂರು ಮಾಡುತ್ತಾ ಭೂಮಿ ಕೇಂದ್ರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೊಂದಾಯಿತವಲ್ಲದ ಪಾಲುವಿಭಾಗ ಹಕ್ಕುಬದಲಾವಣೆ ಮಾಡಲು ಸದರಿ ಅರ್ಜಿಯಲ್ಲಿ 11 ಈ ನಕ್ಷೆಯಿದ್ದ ಕಾರಣ ಐಎಂಪಿ ಮುಟೇಷನ್ ಗೆ ಒಳಪಟ್ಟು ಅರ್ಜಿಯನ್ನು ಪೋಡಿಮಾಡಲು ಸರ್ವೆ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಸ ನಂ 85 ವಿಸ್ತೀರ್ಣ ಪಹಣಿ ಕಾಲಂ 3 2 9 ರಲ್ಲಿ 4.14 ಎಕರೆ ನಮೂದಾಗಿದ್ದು ಪೋಡಿ ಸಹಾಯಕ ನಿರ್ದೇಶಕರು (ಕಾ ನಿ) ಉಪವಿಭಾಗ, ಹೊಸಪೇಟೆರವರು ತಮಲಾಪುರ ಗ್ರಾಮದ ಸ ನಂ 85 ಬಿ, ಆಕಾರಬಂದ್ ನಲ್ಲಿ ಪರಿಶೀಲಿಸಲಾಗಿ (ಎ) 4.44 ಎಕರೆ ಇದ್ದು ಪಹಣಿಯಲ್ಲಿ 4.14 ಎಕರೆ ಇರುತ್ತದೆ. ಕಾರಣ ಆಕಾರ್ ಬಂದಿನ ವಿಸೀರ್ಣಕ್ಕೂ ಮತ್ತು ಪಹಣಿ ವಿಸ್ತೀರ್ಣಕ್ಕೂ ತಾಳೆಯಾಗುವುದಿಲ್ಲ. ಸದರಿ ಸ ನಂ 11 ಈ ಗೆ ಬರದೇ ಆರ್ ಆರ್ ಟಿ ಕಳುಹಿಸುವ ಬದಲಾಗಿ ಕಣ್ ತಪ್ಪಿನಿಂದ ಮಂಜೂರು ಮಾಡಿರುತ್ತಾರೆ. ಸದರಿ ಕಡತವು ಐ ಎಂ ಪಿ ಮಾಡಲು ಬರದ ಕಾರಣ ಸೂಪರ್ ವೈಜರ್ ಲಾಗಿನ್ ನಿಂದ ಕಂದಾಯ ನಿರೀಕ್ಷರ ಲಾಗಿನ್ ಗೆ ವಾಪಾಸು ಹಾಕಲು ಕೋರಲಾಗಿ ಕಡತವನ್ನು ಕಂಧಾಯ ನಿರೀಕ್ಷಕರ ಲಾಗಿನಗೆ ಹಾಕಲಾಗಿ ನಂತರ ಐ ಎಂ ಪಿ ಪೋಡಿಯಾಗದ ಕಾರಣ ಕಡತವನ್ನು ಗ್ರೈಯು ಮಂಜೂರು ಮಾಡುತ್ತಾ ಮುಂದಿನ ಕ್ರಮಕ್ಕೆ ಸಲ್ಲಿಸಿರುತ್ತಾರೆ.

ಗ್ರಾಮಲೆಕ್ಕಾಧಿಕಾರಿಗಳು ತಮಲಾಪುರ ಹಾಗೂ ಕಂದಾಯ ಪರೀವಿಕ್ಷಕರು ಹಡಗಲಿ ರವರು ದಿನಾಂಕ 25–03–2015ರಂದು ಎಂ ಆರ್ ಹೆಚ್ 4/201–16 ದಿನಾಂಕ 2–03–2015ರಂದು ಈಗಾಗಲೇ ಪಾಲುವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಿರುವುದರಿಂದ ಹಾಗೂ ಈಗಾಗಲೇ ಅರ್ಜಿದಾರರಿಗೆ ವಿಳಂಬದಿಂದ ಅನ್ಯಾಯವಾಗಿರುವುದರಿಂದ ಕಂದಾಯ ಪರೀವಿಕ್ಷಕರು ರವರು ಮಾಡಿರುವ ಆದೇಶವನ್ನು ಅನುಷ್ಠಾನಕ್ಕೆ ತರಲು ಹಾಗೂ

ಂದುವಾರದೊಳಗೆ ಸದರಿ ಪಹಣಿಯಲ್ಲಿನ ವ್ಯತ್ಯಾಸದ ವಿಸ್ತೀರ್ಣವನ್ನು ಸರಿಪಡಿಸಲು ಕಂದಾಯ ಪರೀಕ್ಷಕರು ಮತ್ತು ್ರಾಮ ಲೆಕ್ಕಾಧಿಕಾರಿಗಳು ತಮಲಾಪುರ ರವರಿಗೆ ಸೂಚಿಸಿ ಈ ಕೆಳಕಂಡ ಆದೇಶ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣದಿಂದಾಗಿ ಎಂ ಆರ್ ನಂಬರ್ ಹೆಚ್ 44/2015-16 ದಿನಾಂಕ 25/03/2015ರಂದು ಕಂದಾಯ ಪರೀವಿಕ್ಷಕರು ಹೂವಿನಹಡಗಲಿರವರು ಮಾಡಿದ ಆದೇಶದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಹಾಗೂ ಈ ಆದೇಶದ ನಂತರ ಒಂದುವಾರದೊಳಗೆ ಕಂದಾಯ ಪರೀವಿಕ್ಷಕರು ಹಾಗೂ ಗ್ರಾಮಲೆಕ್ಕಾಧಿಕಾರಿಗಳು ತಮಲಾಪುರ ರವರು ಸದರಿ ಪಹಣಿಯಲ್ಲಿನ ವ್ಯತ್ಯಾಸದ ವಿಸ್ತೀರ್ಣವನ್ನು ಪತ್ತೆಮಾಡಿ ಪಹಣಿ ಸರಿಪಡಿಸಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ತಮ್ಮ ವಿಶ್ವಾಸಿ

ತಹಶೀಲ್ದಾರರು

ಹೂವಿನಹಡಗಲಿ

ಪ್ರತಿಯನ್ನು:-

1)ವಾದಿ/ಪ್ರತಿವಾದಿಗಳಿಗೆ ಹಾಗೂ ಅವರ ಪರ ವಕೀಲರಿಗೆ

2)ಗಣಕೀರಣ ಕೇಂದ್ರ ಶಾಖೆ ಶಿರಸ್ತೇದಾರರು ತಾಲೂಕ ಕಛೇರಿ ಹಡಗಲಿ ಇವರಿಗೆ

3)ಕಂದಾಯ ನೀರಿಕ್ಷಕರು ಹಡಗಲಿ ಇವರಿಗೆ

4)ಹೆಚ್ಚಿನ ಪ್ರತಿ ಕಛೇರಿ ಕಡತಕ್ಕೆ

5) ಗ್ರಾಮಲೆಕ್ಕಾಧಿಕಾರಿಗಳು ತಮಲಾಪುರ ಇವರಿಗೆ.